

# ಮತ್ತೆ ಬಂದ ಬಾಂಡ್



ಹಾಲಿವುಡ್‌ನಲ್ಲಿ ಯಾವುದೇ ಆ್ಯಕ್ಷನ್ ಸಿನಿಮಾಗಳು ಬಂದರೂ ಅವು ಜೇಮ್ಸ್ ಬಾಂಡ್ ಸರಣಿಗೆ ಸಮವಲ್ಲ ಎಂಬ ಮಾತಿದೆ. ಆತನಿಗೆ ಸಾವೂ ಇಲ್ಲ. ಹೀಗಾಗಿಯೇ 1962ರಲ್ಲಿ ಪ್ರಾರಂಭವಾದ ಬಾಂಡ್ ಸಿನಿಮಾಗಳ ಸರಣಿ ಇಂದಿಗೂ ಜನಪ್ರಿಯ. ಜೇಮ್ಸ್ ಬಾಂಡ್ ಸರಣಿಯ ಹೊಸ ಚಿತ್ರ 'ಸ್ಪೆಕ್ಟರ್' ನವೆಂಬರ್ 24ರಂದು ತೆರೆ ಕಾಣುತ್ತಿದೆ. ಇದು ಈ ಸರಣಿಯ 24ನೇ ಸಿನಿಮಾ. 'ಕ್ಯಾಸಿನೊ ರಾಯಲ್', 'ಕ್ವಾಂಟಮ್ ಆಫ್ ಸೋಲೆಸ್' ಮತ್ತು 'ಸ್ಕೈಫಾಲ್' ಚಿತ್ರಗಳಲ್ಲಿ ನಟಿಸಿದ್ದ ಡೇನಿಯಲ್ ಕ್ರೆಗ್, ಸತತ ನಾಲ್ಕನೇ ಬಾರಿಗೆ 'ಜೇಮ್ಸ್ ಬಾಂಡ್' ಆಗುತ್ತಿದ್ದಾನೆ.

'ಸ್ಪೆಕ್ಟರ್' ಅನೈತಿಕ ಚಟುವಟಿಕೆಗಳನ್ನು ಮಾಡುವ ಜಾಗತಿಕ ಸಂಸ್ಥೆಯೊಂದರ ಹೆಸರು. ಈ ಹೆಸರು ಶಾನ್ ಕಾನರಿ ಜೇಮ್ಸ್ ಬಾಂಡ್ ಆಗಿ ನಟಿಸಿದ್ದ ಕೊನೆಯ ಸಿನಿಮಾ 'ಡೈಮಂಡ್ಸ್ ಆರ್ ಫಾರೆವರ್' ಚಿತ್ರದಲ್ಲಿ ಮೊದಲ ಬಾರಿಗೆ ಬಳಕೆಯಾಗಿತ್ತು. ಈಗ ಡೇನಿಯಲ್ ಕ್ರೆಗ್ 'ಸ್ಪೆಕ್ಟರ್'ನ ಜಾಲವನ್ನು ಬೆನ್ನಟ್ಟುವ ಸಾಹಸಕ್ಕೆ ಕೈಹಾಕಿದ್ದಾರೆ. ಕೌತುಕಮಯವಾಗಿ ಸಾಗುವ ಎಂದಿನ ಬಾಂಡ್ ಸಿನಿಮಾಗಳ ಶೈಲಿಯಲ್ಲಿ ಇದು ಮೈನವಿರೇಳಿಸುವ ಆ್ಯಕ್ಷನ್ ಅನುಭವ ಕಟ್ಟಿಕೊಡುತ್ತದೆ ಎನ್ನುತ್ತದೆ ಚಿತ್ರತಂಡ.

ಕ್ರಿಸ್ಟೋಫರ್ ವಾಲ್ಟ್ಜ್ ಈ ಚಿತ್ರದಲ್ಲಿ 'ಬಾಂಡ್' ಕ್ರೆಗ್‌ಗೆ ಎದುರಾಳಿ. ಚಿತ್ರದ ಗ್ಲಾಮರ್ ಭಾಗವನ್ನು ತುಂಬುತ್ತಿರುವುದು ನಟಿ ಮೋನಿಕಾ ಬೆಲುಕ್ಕಿ. ಜೇಮ್ಸ್ ಬಾಂಡ್‌ಗೆ ಬಾಸ್ 'ಎಂ' ಪಾತ್ರದಲ್ಲಿ ರಾಲ್ಫ್ ಫೀಯೆನ್ನೆಸ್ ಕಾಣಿಸಿಕೊಳ್ಳುತ್ತಿದ್ದಾನೆ. ಬಾಂಡ್‌ಗೆ ಗನ್ ಮತ್ತು ಗ್ಯಾಜೆಟ್‌ಗಳನ್ನು ಪೂರೈಸುವ 'ಕ್ಯು' ಆಗಿ ಬೆನ್ ವಿಷಾವ್ ನಟಿಸಿದ್ದಾರೆ.

'ಅಮೆರಿಕನ್ ಬ್ಯೂಟಿ', 'ರೋಡ್ ಟು ಪರ್ಡಿಷನ್' ಚಿತ್ರಗಳ ಜೊತೆ ಬಾಂಡ್ ಸರಣಿಯ 'ಸ್ಕೈಫಾಲ್'ಗೆ ಆ್ಯಕ್ಷನ್ ಕಟ್ ಹೇಳಿದ್ದ ಸ್ಯಾಮ್ ಮೆಂಡೆಸ್ 'ಸ್ಪೆಕ್ಟರ್'ನ ನಿರ್ದೇಶಕ. 'ಲಿವಿಂಗ್ ಡೇಲೈಟ್ಸ್', 'ಸ್ಕೈಫಾಲ್' ಮತ್ತು 'ಲೈಸೆನ್ಸ್ ಟು ಕಿಲ್' ಚಿತ್ರಗಳಿಗೆ ಸೆಟ್ ಹಾಕಿದ್ದ ಜಾನ್ ಗ್ಲೆನ್ ಕೈಚಳಕ ಇಲ್ಲಿಯೂ ಮುಂದುವರಿದಿದೆ. 148 ನಿಮಿಷಗಳ ಈ ಚಿತ್ರಕ್ಕೆ ಒಟ್ಟು ಸುರಿದಿದೆ ಎನ್ನಲಾದ ಬಂಡವಾಳ 300 ಮಿಲಿಯನ್ ಡಾಲರ್.

## ಯುವಿ ಸರದಿ...

ಕ್ರಿಕೆಟಿಗ ಹರ್ಭಜನ್ ಸಿಂಗ್, ನಟಿ ಗೀತಾ ಬಾಸ್ರಾ ಜೊತೆ ಹಸೆಮಣೆ ಏರಿ ಭಲ್ಲೆ ಭಲ್ಲೆ ಎನ್ನುತ್ತಿದ್ದಾರೆ. ಭಜ್ಜಿಯ ಮದುವೆ ಕುರಿತು ಯುವರಾಜ್ ಮಾಡಿದ ತಮಾಷೆಯ ಟ್ವೀಟ್‌ಗೆ ಮುಂದಿನ ಸರದಿ ನಿನ್ನದು ಎಂದು ತಮಾಷೆಯಾಗಿಯೇ ಪ್ರತ್ಯುತ್ತರ ನೀಡಿದ್ದ ಭಜ್ಜಿ. ಅದೀಗ ನಿಜವಾಗುವ ಸೂಚನೆ ಕಂಡುಬಂದಿದೆ.

ಯುವಿಯೊಂದಿಗೆ ಸಪ್ತಪದಿ ತುಳಿಯಲಿರುವ ಯುವತಿ ಕೂಡ ಬಣ್ಣದ ಲೋಕದವಳೇ. ಆದರೆ ಈಕೆ ಹೆಚ್ಚು ಜನಪ್ರಿಯಳಲ್ಲ. 'ಬಾಡಿಗಾರ್ಡ್' ಚಿತ್ರದಲ್ಲಿ ನಟಿಸಿದ್ದ ಹೇಜೆಲ್ ಕೀಚ್, ಯುವಿಯ ಜೋಡಿ. ಯುವಿ ಮತ್ತು ಕೀಚ್ ಇಬ್ಬರೂ ಹಲವು ಕಾಲದಿಂದ ಡೇಟಿಂಗ್ ನಡೆಸುತ್ತಿರುವುದು ಗುಟ್ಟಾಗೇನೂ ಉಳಿದಿಲ್ಲ. ಭಜ್ಜಿ ಮತ್ತು ಗೀತಾ ಮದುವೆಯಲ್ಲಿ ಇಬ್ಬರೂ ಕಾಣಿಸಿಕೊಂಡಿದ್ದರು. ಡಿಸೆಂಬರ್ 13ರಂದು ಇಬ್ಬರ ವಿವಾಹಕ್ಕೆ ಮುಹೂರ್ತ ನಿಗದಿಯಾಗಿತ್ತು. ಆದರೆ ಕೌಟುಂಬಿಕ ಕಾರಣದಿಂದ ಅದನ್ನು ಮುಂದಿನ ಫೆಬ್ರುವರಿಗೆ ಮುಂದೂಡಲಾಗಿದೆ. ಚಂಡೀಗಢದಲ್ಲಿ ಸಾಂಪ್ರದಾಯಿಕ ರೀತಿಯಲ್ಲಿ ಯುವಿ ಮತ್ತು ಕೀಚ್ ಮದುವೆಯಾಗಲಿದ್ದಾರೆ.

ಎಸ್ಸೆಕ್ಸ್‌ನಿಂದ ಬಂದ ಕೀಚ್ ಈಗ ಭಾರತದಲ್ಲಿಯೇ ನೆಲೆಯೂರಿದ್ದಾಳೆ. ಜಾಹೀರಾತುಗಳು, ಬಾಲಿವುಡ್‌ನ ಪೋಷಕ ಪಾತ್ರಗಳಲ್ಲಿ ನಟಿಸುತ್ತಿರುವ ಈಕೆ ಜನರಿಗೆ ಪರಿಚಿತವಾಗಿದ್ದು ಬಿಗ್‌ಬಾಸ್ ಮೂಲಕ. ಯುವಿಯ ಬಾಲಿವುಡ್ ನಂಟು ಹೊಸತೇನಲ್ಲ. ಕಿಮ್ ಶರ್ಮ, ದೀಪಿಕಾ ಪಡುಕೋಣೆ ಮತ್ತು ಕಿಂಗ್ಸ್ ಇಲೆವೆನ್ ಪಂಜಾಬ್ ಐಪಿಎಲ್ ತಂಡ ಮಾಲಕಿಯೂ ಆದ ಪ್ರೀತಿ ಜಿಂಟಾ ಜೊತೆ ಆತನ ಹೆಸರು ಕೇಳಿಬಂದಿತ್ತು ಕೊನೆಗೆ ಕೀಚ್ ಬಲೆಗೆ ಬಿದ್ದ ಯುವಿ, ಗೆಳತಿಯರ ಪಟ್ಟಿಗೆ ಫುಲ್‌ಸ್ಟಾಪ್ ಹಾಕಲು ನಿರ್ಧರಿಸಿದ್ದಾನೆ.

■ ಅಮಿ